ಕರ್ನಾಟಕ ಪರೀಕ್ಷಾ ಪ್ರಾಧಿಕಾರ

Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪಿಜಿನೀಟ್/ಎಮ್-ಸಿಇಆರ್-13/2025 ದಿನಾಂಕ: 17-01-2026

ಪ್ರಕಟಣೆ

**3ನೇ ಸುತ್ತಿನ (ಮಾಪ್ ಅಪ್) ಸೀಟು ಹಂಚಿಕೆಗಾಗಿ ಪಿಜಿನೀಟ್-2025 ರಲ್ಲಿ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಪ್ರವೇಶಕ್ಕಾಗಿ ಅರ್ಹತಾ ಶೇಕಡಾವಾರು ಕಡಿಮೆಯಾದ ಕಾರಣದಿಂದ ಆನ್‌ಲೈನ್ ನೋಂದಣಿ, ಅರ್ಜಿ ಸಲ್ಲಿಸುವುದು, ಮೂಲ ದಾಖಲೆಗಳ ಪರಿಶೀಲನೆ ಮತ್ತು ಡೆಪಾಸಿಟ್ ಮಾಡುವುದು**

MoHFW ನವದೆಹಲಿ ಇವರು 09-01-2026 ರಂದು ಪ್ರಕಟಿಸಿದ ಸೂಚನೆಯಲ್ಲಿ NEETPG ಕೌನ್ಸಿಲಿಂಗ್ 2025ಕ್ಕಾಗಿ ಪಿಜಿ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸಲಾಗಿದೆ ಎಂದು ತಿಳಿಸಿರುವ ಕಾರಣದಿಂದ NBEMS, New Delhi ಇವರು 13-01-2026 ರಂದು ತಮ್ಮ ವೆಬ್‌ಸೈಟಿನಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಶೇಕಡಾವಾರು ಅರ್ಹತಾ ಪ್ರಮಾಣವನ್ನು **"7th Percentile"** ಗೆ ಮತ್ತು ಎಸ್‌ಸಿ / ಎಸ್‌ಟಿ / ಓಬಿಸಿ ಅಭ್ಯರ್ಥಿಗಳಿಗೆ **"0" Percentile** ಗೆ ಕಡಿಮೆ ಮಾಡಿರುವುದಾಗಿ notice ಪ್ರಕಟಿಸಿರುತ್ತಾರೆ. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

*2025ನೇ ಸಾಲಿನ* ***ಪಿಜಿ ವೈದ್ಯಕೀಯ ಕೋರ್ಸುಗಳ*** *ಪ್ರವೇಶಕ್ಕಾಗಿ ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ, ಆನ್‌ಲೈನ್ ನೊಂದಣಿ, ಅರ್ಜಿ ಸಲ್ಲಿಸಲು ಹಾಗು ಶುಲ್ಕ ಪಾವತಿಸಲು ಪ್ರಾಧಿಕಾರದ ಪೋರ್ಟಲ್ ಅನ್ನು 18-01-2026 ರ ಬೆಳಿಗ್ಗೆ 11.00 ಗಂಟೆಯಿಂದ 26-01-2026 ರ ಬೆಳಿಗ್ಗೆ 11.00 ರವರೆಗೆ ತೆರೆಯಲಾಗುವುದು.*

ಮುಂದಿನ ಯಾವುದೇ ಸುತ್ತಿನ ಸೀಟು ಹಂಚಿಕೆಗೆ ಆನ್‌ಲೈನ್ ನೊಂದಣಿ ಮಾಡಿಕೊಳ್ಳಲು / ಅರ್ಜಿ ಸಲ್ಲಿಸಲು ಅವಕಾಶಗಳನ್ನು ನೀಡಲಾಗುವುದಿಲ್ಲ.

*ಅರ್ಹಗೊಳ್ಳುವ ಆಸಕ್ತಿ ಇರುವ ಎಲ್ಲಾ ಅಭ್ಯರ್ಥಿಗಳು* ***ಈ ಮೇಲಿನ ಅವಧಿಯಲ್ಲಿ*** *ಆನ್‌ಲೈನ್ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಬಹುದಾಗಿದೆ ಹಾಗು 3ನೇ ಸುತ್ತಿನಲ್ಲಿ (ಮಾಪ್ ಅಪ್) ಲಭ್ಯವಾಗುವ ಸೀಟುಗಳ ಹಂಚಿಕೆಗೆ ಮಾತ್ರ ಇತರೆ ಅಭ್ಯರ್ಥಿಗಳ ಜೊತೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಬಹುದಾಗಿದೆ.*

*3ನೇ ಸುತ್ತಿಗೆ ಲಭ್ಯವಿರುವ ಸೀಟುಗಳ ವಿವರಗಳನ್ನು ದಿನಾಂಕ 17-01-2026 ರಂದು ಪ್ರಾಧಿಕಾರದ ವೆಬ್‌ಸೈಟ್* https://cetonline.karnataka.gov.in/kea/pgetmed2025 *ನಲ್ಲಿ ಪ್ರಕಟಿಸಲಾಗಿದೆ. ರದ್ದುಗೊಳ್ಳಬಹುದಾದ ಅಥವಾ ಹೊಸದಾಗಿ ಸೇರ್ಪಡೆಯಾಗುವ ಸೀಟುಗಳು ಇದ್ದಲ್ಲಿ ಅಂತಹ ಸೀಟುಗಳನ್ನೂ ಹಂಚಿಕೆಗೆ ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟಿಗೆ ಭೇಟಿ ನೀಡುತ್ತಿರಲು ಸೂಚಿಸಿದೆ.*

ಇಲ್ಲಿಯವರೆಗೆ ನೊಂದಣಿ ಮಾಡದಿರುವ ***ಪಿಜಿ ವೈದ್ಯಕೀಯ*** ಅರ್ಹ ಅಭ್ಯರ್ಥಿಗಳೂ ಸಹ ನೊಂದಣಿ ಮಾಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ. NEET-PG2025 ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ವಿದ್ಯಾರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಪ್ರಚುರ ಪಡಿಸಲಾಗಿದೆ.

ಈ ಮೇಲಿನ ದಿನಾಂಕಗಳಂದು ನೊಂದಣಿ ಮಾಡಿ ಶುಲ್ಕವನ್ನು ಪಾವತಿಸುವ ***ಪಿಜಿ ವೈದ್ಯಕೀಯ*** ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆ ಹಾಗು deposit ಮಾಡುವುದಕ್ಕಾಗಿ ದಿನಾಂಕ **27-01-2026** ಅಥವಾ **28-01-2026** ಅಥವಾ **29-01-2026** ರಂದು (ಬೆ. 11.00 ರಿಂದ ಸಂ. 4.00) ಕೆಇಎ, ಬೆಂಗಳೂರು ಇಲ್ಲಿ ಎಲ್ಲಾ ಅವಶ್ಯ ಮೂಲ ದಾಖಲೆಗಳು ಮತ್ತು ಎರಡು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು – ವರದಿ ಮಾಡಿಕೊಳ್ಳುವುದು. ಅರ್ಹತೆಗೆ ಅನುಗುಣವಾಗಿ ಮೂಲ ದಾಖಲೆಗಳನ್ನು ಹಾಜರುಪಡಿಸದ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲಾಗುವುದಿಲ್ಲ ಮತ್ತು ಅಂತಹ ಅಭ್ಯರ್ಥಿಗಳು 3ನೇ ಸುತ್ತಿಗೆ ಅರ್ಹತೆ ಪಡೆಯುವುದಿಲ್ಲ. ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗಾಗಿ ಬೆಂಗಳೂರಿನ ಕೆಇಎ ಕಚೇರಿಗೆ ಬರುವ ಮೊದಲು ಎಲ್ಲಾ ಮೂಲ ದಾಖಲೆಗಳನ್ನು ತಮ್ಮೊಂದಿಗೆ ಇಟ್ಟುಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳುವುದು ಸೂಕ್ತ.

ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ್ದರಿಂದ ಅರ್ಹತೆ ಪಡೆಯುವ ***ಪಿಜಿ ವೈದ್ಯಕೀಯ*** ವಿಕಲಚೇತನ ಅಭ್ಯರ್ಥಿಗಳು ದಿನಾಂಕ **28-01-2026** ರಂದು ಬೆಳಿಗ್ಗೆ 11.00 ವೈದ್ಯಕೀಯ ಪರಿಶೀಲನೆಗೆ ಕೆಇಎ, ಬೆಂಗಳೂರು ಇಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು. (ಸೀಟುಗಳು ಲಭ್ಯವಿದ್ದಲ್ಲಿ)

**PG MEDICAL 3ನೇ ಸುತ್ತಿನ (MOP-UP) ಸೀಟು ಹಂಚಿಕೆಯ ವೇಳಾಪಟ್ಟಿ / ಹಂತಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು**

ಎಂಸಿಸಿ ರವರ 3ನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಸೀಟು ಹಂಚಿಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಒಂದು ವೇಳೆ ಪ್ರಾಧಿಕಾರದ 3ನೇ ಸುತ್ತಿಗೆ ಭಾಗವಹಿಸಲು ಮೂಲ ದಾಖಲೆಗಳನ್ನು ಸಲ್ಲಿಸಿದ್ದರೆ, ಪ್ರಾಧಿಕಾರದಿಂದ ಮೂಲ ದಾಖಲೆಗಳನ್ನು ತಕ್ಷಣ ಹಿಂಪಡೆಯುವುದು.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**

18th Cross, Sampige Road, Malleshwaram, Bengaluru - 560 012.

Phone: 080 - 23 564 583 Helpline : 080 - 23 460 460.

e-mail : keauthority-ka@nic.in Website : http://kea.kar.nic.in